



‘ಹಂಸಗೀತೆ’ಯ ರೂವಾರಿ ಜಿ.ವಿ. ಅಯ್ಯರ್ (ಎಡಚಿತ್ರ), ‘ಹಂಸಗೀತೆ’ ಕಾದಂಬರಿಕಾರ ತ.ರಾ.ಸು.

ಇಳಿಯುವ ದೃಶ್ಯ. ವೆಂಕಣ್ಣ ಸಭೆಯನ್ನು ಪ್ರವೇಶಿಸುವ ಮೊದಲು ಹಾಲಕ್ಕಿಯ ಕೂಗೊಂದನ್ನು ಬಳಸಿಕೊಳ್ಳುವ ಮೂಲಕ ಅಯ್ಯರ್ ಎಲ್ಲರ ಗಮನವನ್ನು ತಿರುಗಿಸಿ, ಮುಂದೊದಗಬಹುದಾದ ಅಶುಭವವನ್ನು ಸೂಚಿಸುತ್ತಾರೆ. ದೇವರಲ್ಲಿ ದೃಷ್ಟಿ ಇಟ್ಟ ವೆಂಕಣ್ಣನಿಗೆ ಅಲ್ಲಿರುವ ಯಾರೂ ಕಾಣಿಸುವುದಿಲ್ಲ. ಅವನು ದೇವರಿಗೆ ಶರಣಾಗತನಾಗಿ ಅನ್ಯ ವಿಧಿಯಿಲ್ಲದೆ ಗುರುವಿನೊಂದಿಗೆ ಸ್ಪರ್ಧಿಸಿ, ತನ್ನತನವನ್ನು ಉಳಿಸಿಕೊಳ್ಳಬೇಕೆಂದು ಹಲಬುವ ಹುಡುಗನನ್ನು ಸಾಂತ್ವನದಿಂದ ಗುರುವಿನ ಗುಣವನ್ನು ವಿಶ್ಲೇಷಿಸುವ ಪೂಜಾರಿಯ ಮಾತುಗಳನ್ನು ಸತ್ಯ ನಿಷ್ಠೂರವಾದ ವೆಂಕಣ್ಣನ ವಾದವನ್ನು ಇಲ್ಲಿ ಕಾಣಬಹುದು. ಗುರು ಕಲ್ಯಾಣಿ ರಾಗ-ತಾಳದ ‘ಹಿಮಾದ್ರಿ ಸುತೆ’ಯನ್ನ ಹಾಡಿದಾಗ ಅದೇ ಹಾಡನ್ನು ಶಿಷ್ಯ ವೆಂಕಣ್ಣ ‘ತಿಶ್ರದಲ್ಲಿ ಹಾಡಲೇ’ ಎಂದು ಕೇಳುತ್ತಾನೆ. ಆಗ ಗುರು ‘ನಿರ್ದಿಷ್ಟ ರಾಗದ ಹೊರತಾಗಿ ಬೇರೆ ರೀತಿಯಲ್ಲಿ ಅದು ಹಾಡುವುದು ಸಾಧ್ಯವಿಲ್ಲ’ ಎನ್ನುತ್ತಾನೆ. “ಅವರು ಹಾಡ್ತೀನಂದ್ರೆ ಇವರು ಬೇಡ ಅನ್ನೋದ್ಯಾಕೋ” ಎಂದು ಸಂಗೀತ ಬಲ್ಲವರೊಬ್ಬರ ಮಾತಿನಿಂದ ಮುನಿದ ತಿರುಮಲಯ್ಯ ಹಾಡುವಂತೆ ಸೂಚಿಸುತ್ತಾನೆ. “ವೆಂಕಣ್ಣ ತಂಬೂರಿಯೊಂದಿಗೆ ಶ್ರುತಿ ಸೇರಿಸಿ ಕಲ್ಯಾಣಿ ರಾಗವನ್ನೇ ಎತ್ತಿಕೊಳ್ಳುತ್ತಾನೆ. ಅವನು ರಾಗವನ್ನು ಎತ್ತಿಕೊಂಡ ರೀತಿಯಲ್ಲೇ ಕೇಳುಗರ ಮೈಯಲ್ಲಿ ಮಿಂಚು ಸಂಚಾರವಾದಂತಾಗುತ್ತದೆ. ಮೊದಲು ರಾಗದ ಸ್ವರ ಸಂಚಾರವನ್ನು ಸೂಚಿಸಿ, ನಂತರ ಅದರ ನಡೆಯನ್ನು ವಿಸ್ತರಿಸಿ, ಹಾಡಿ ಭಾವ ಪ್ರಕಾಶಕ್ಕೆ ಪಲ್ಲವಿಯನ್ನು ತೆಗೆದುಕೊಂಡು ವೆಂಕಣ್ಣ ಎಷ್ಟು ಹೊತ್ತು ಹಾಡಿದನೋ, ಒಬ್ಬರಿಗೂ ಎಚ್ಚರವಿಲ್ಲ. ಮೃದಂಗದವನು ಕೈ ನಡೆಯದೆ ಕೈ ಚೆಲ್ಲಿ ಕುಳಿತಿರುತ್ತಾನೆ. ಕೇಳುವವರೆಲ್ಲ ನಾದದ ಮೋಡಿಗೊಳಗಾಗಿ ಚಿತ್ರದ ಗೊಂಬೆಗಳಂತೆ ಕುಳಿತಿರುತ್ತಾರೆ...” ಎನ್ನುವುದು ತ.ರಾ.ಸು ಅವರ ಕಾದಂಬರಿಯ ಸಾಲುಗಳು. ಈ ಸಾಲುಗಳು ದೃಶ್ಯವಾಗಿ, ಸಂಗೀತವಾಗಿ ತ.ರಾಸು. ವರ್ಣಿಸುವಂತೆಯೇ ಪ್ರೇಕ್ಷಕರನ್ನು ಮೊದಲ ಹಂತದಲ್ಲಿಯೇ ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತದೆ.

## ನಾದಮಯ, ಈ ಲೋಕವೆಲ್ಲ ನಾದಮಯ

ಇನ್ನು ಗುರು ತಿರುಮಲಯ್ಯನ ಸಾವಿಗೆ ಕಾರಣ